C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆಃ101/2023 C/w 113/2023**

ಪ್ರಾಸಾ. 23 ಚಾಸಾ. 40

| | |
|---|---|
| ಸಾಕ್ಷಿದಾರರ ಹೆಸರು | ಈ ರಾಜು |
| ತಂದೆಯ ಹೆಸರು | ವೀರಯ್ಯ |
| ವಯಸ್ಸು | 45 ವರ್ಷಗಳು |
| ಉದ್ಯೋಗ | ವಾಟರ್ ಮ್ಯಾನ್ ಕೆಲಸ |
| ವಾಸ | ದೊಡ್ಡರಸಿನಕೆರೆ ಗ್ರಾಮ |

**ಸಾಕ್ಷಿಯನ್ನು ದಿನಾಂಕಃ30.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ 8ನೇ ಆರೋಪಿ/ ಮಹೇಶ್ ಉಃ ಕರಿಗೂಳಿ ಮುಖಪರಿಚಯ ಇರುತ್ತದೆ. ಸಾಕ್ಷಿಗೆ ಈಗ ತೋರಿಸಿದಂತಹ ನಿಪಿ-43 ರಲ್ಲಿ ಸಾಕ್ಷಿ ತನ್ನ ಸಹಿ ಇದೆ ಎಂದು ಹೇಳಿದ್ದರಿಂದ ಅದನ್ನು ನಿಪಿ-43(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-44ನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿ ಸದರಿ ದಾಖಲೆಯಲ್ಲೂ ಸಹ ತನ್ನ ಸಹಿ ಇರುತ್ತದೆ ಎಂದು ಗುರುತಿಸಿರುತಾರೆ. ಆದ್ದರಿಂದ ಸದರಿ ಮಹಜರಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-44(ಬಿ) ಎಂದು ಗುರುತಿಸಲಾಯಿತು. ಚಾಸಾ-39 ಗೊತ್ತು. ನಾನು ದಾಖಲೆಗೆ ಸಹಿ ಮಾಡಿದ ಸಮಯದಲ್ಲಿ ಚಾಸಾ-39 ರವರೂ ಸಹ ಸಹಿ ಮಾಡಿರುತ್ತಾರೆ.

2. ಅದೇ ರೀತಿ ನಿಪಿ-46 ಮಹಜರನ್ನು ನೋಡುತ್ತಿದ್ದು, ಸದರಿ ಮಹಜರಿನಲ್ಲಿಯೂ ಸಾಕ್ಷಿ ತನ್ನ ಸಹಿ ಇರುತ್ತದೆ ಎಂದು ನುಡಿದಿರುವುದರಿಂದ ಸಾಕ್ಷಿಯನ್ನು ನಿಪಿ-46(ಬಿ) ಎಂದು

ಗುರುತಿಸಲಾಯಿತು. ಮೇಲೆ ಹೇಳಿದಂತಹ ಎಲ್ಲಾ ದಾಖಲಾತಿಗಳಿಗೆ ಪೊಲೀಸ್ ಠಾಣೆಯಲ್ಲಿ ಪೊಲೀಸರು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಸದರಿ ಸಹಿ ಸುಮಾರು ಒಂದೂವರೆ ವರ್ಷಗಳ ಹಿಂದೆ ಮಾಡಿರುತ್ತೇನೆ.

3. ನನ್ನ ಮುಂದೆ ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. 8 ನೇ ಆರೋಪಿ ಪೊಲೀಸರಿಗೆ ಯಾವುದಾದರೂ ವಸ್ತುವನ್ನು ಕೊಟ್ಟಿಲ್ಲ. ಮು.ಮ.12 ನ್ನು ಒಂದು ಬಿಳಿ ಬಟ್ಟೆಯಲ್ಲಿ ಮೊಹರು ಮಾಡಿ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಚೀಲದಲ್ಲಿ ಏನಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮು.ಮ.12 ನ್ನು ಸಾಕ್ಷಿಗೆ ತೋರಿಸಿದಾಗ ಸದರಿ ಮೊಬೈಲ್ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅದನ್ನು ನನ್ನ ಮುಂದೆ ಅಮಾನತುಪಡಿಸಿಕೊಂಡಿರುವುದಿಲ್ಲ. ನಾನು ಸಹಿ ಮಾಡಿದಾಗ ಮಧ್ಯಾಹ್ನ 12.00 ಗಂಟೆ ಸಮಯವಾಗಿತ್ತು. ಮಹಜರ್ ಹಾಗೂ ನೋಟೀಸಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

4. ಈಗ ಸಾಕ್ಷಿಗೆ ನಿಪಿ45(1 ಮತ್ತು 2) ತೋರಿಸಲಾಗಿ ಸದರಿ ಎರಡು ಫೋಟೋಗಳನ್ನು ಸಾಕ್ಷಿ ನೋಡಿ ಒಂದು ಫೋಟೋ 8 ನೇ ಆರೋಪಿಯ ಮನೆಯ ಬಳಿ ತೆಗೆಸಿರುತ್ತಾರೆ ಎಂದು ಮತ್ತೊಂದರಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಮತ್ತು 8 ನೇ ಆರೋಪಿಯ ವಾಯ್ಸ್ ಸ್ಯಾಂಪಲ್ ಸಹ ಪಡೆದಿರುವುದಿಲ್ಲ. ಈಗ ನಿಪಿ-47 ನೋಡುತ್ತಿದ್ದು, ಅದನ್ನು ಗುರುತಿಸಲು ಆಗುವುದಿಲ. ಆ ಬಗ್ಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕಃ09.01.2023 ರಂದು ಪೊಲೀಸರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 8 ನೇ ಆರೋಪಿಯಾದ ಮಹೇಶ ರವರ ಮನೆಯ ಬಳಿ ಮಹಜರ್ ಮಾಡಿ, ಮೊಬೈಲ್ ಅಮಾನತುಪಡಿಸಿಕೊಳ್ಳಬೇಕಾಗುತ್ತದೆ ಆ ಸಮಯದಲ್ಲಿ ಹಾಜರಾಗಬೇಕು ಎಂದು ನಿಪಿ-43 ರಂತೆ ನೋಟೀಸ್ ನೀಡಿದಾಗ ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ನಂತರ ಪೊಲೀಸರು 8 ನೇ ಆರೋಪಿಯೊಂದಿಗೆ ಆತನ ಮನೆಗೆ ಹೋಗಿದ್ದಾಗ 8 ನೇ ಆರೋಪಿ ತನ್ನ ಮನೆಯ ಬೆಡ್ ರೂಮಿನಲ್ಲಿ ಒಂದು ಬೀರುವಿನಿಂದ ಒಂದು ಮೊಬೈಲ್ ಅಂದರೆ ಮು.ಮ.12 ನ್ನು ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಎಂದು ಪೊಲೀಸರ ಮುಂದೆ ಹಾಜರುಪಡಿಸಿದನು. ಆ ಸಮಯದಲ್ಲಿ ಪೊಲೀಸರು ಪರಿಶೀಲಿಸಿದಾಗ ಸದರಿ ಮೊಬೈಲಿನ ಪೌಚಿನಲ್ಲಿ ಒಂದು ಸಿಮ್ ಕಾರ್ಡ್ ಇದ್ದು, ಅದನ್ನು ನೋಡಿ ಪೊಲೀಸರು ಮೊಬೈಲ್ ಹಾಗೂ ಸಿಮ್ ಕಾರ್ಡನ್ನು ನಮ್ಮ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಮೊಹರು ಮಾಡಿಕೊಂಡರು ಎಂದರೆ ಸರಿಯಲ್ಲ. ಸದರಿ ಮಹಜರ್ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.15 ಗಂಟೆಯವರೆಗೆ ಮಾಡಿದರು ಎಂದರೆ ಸರಿಯಲ್ಲ. ನಾವು ಸದರಿ ಮಹಜರಿನಲ್ಲಿ ಬರೆದಿರುವ ವಿಚಾರವನ್ನು ತಿಳಿದು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-44 ರಲ್ಲಿ 8 ನೇ ಆರೋಪಿ ಮು.ಮ.12 ನ್ನು ನಮ್ಮ ಸಮಕ್ಷಮ ಹಾಜರುಪಡಿಸಿದ್ದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಂತರ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನ 12.30 ರಿಂದ 1.30 ರವರೆಗೆ 8 ನೇ ಆರೋಪಿಯು ಹಾಜರಿದ್ದು, ಸಿ.ಡಬ್ಲ್ಯು 49 ರವರ ಮೊರೋಲ್ಯಾಕ್ಸ್ ಕಂಪನಿಯ ಎ 1 ಕೇ ಮೊಬೈಲಿಗೆ ಈಗ ತೋರಿಸಿದಂತಹ 4 ಜಿಬಿ ಮೆಮೋರಿ ಕಾರ್ಡನ್ನು(ನಿಪಿ-47) ಅಳವಡಿಸಿ, ನಂತರ 8 ನೇ ಆರೋಪಿಯ ವಾಯ್ಸ್ ರೆಕಾರ್ಡಿಂಗ್ ಪಡೆಯಲಾಯಿತು ಎಂದರೆ ಸರಿಯಲ್ಲ. ಸದರಿಯವರ ಧ್ವನಿಯನ್ನು ಮೂರು ಸುತ್ತಿನಲ್ಲಿ ಕನ್ನಡ ಸಂಭಾಷಣೆಯಲ್ಲಿ ನನ್ನ ಸಮಕ್ಷಮ ಪಡೆಯಲಾಯಿತು ಎಂದರೆ ಸರಿಯಲ್ಲ. ನಂತರ ಸದರಿ ಕಾರ್ಡನ್ನು ನಮ್ಮ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಮೊಹರು ಮಾಡಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-39 ರವರೂ ಸಹ ಹಾಜರಿದ್ದು, ಸಹಿ ಮಾಡಿದರು ಎಂದರೆ ಸರಿಯಲ್ಲ.

**4.** ಮಧ್ಯಾಹ್ನ **12.30** ರಿಂದ **1.30** ರವರೆಗೆ ನಮ್ಮ ಸಮಕ್ಷಮ ಕಂಪ್ಯೂಟರ್ ನಲ್ಲಿ ಪ್ರಿಂಟ್ ತೆಗೆಯಲಾಯಿತು ಎಂದರೆ ಸರಿಯಲ್ಲ. ನಾವು ಸದರಿ ಮಹಜರಿನಲ್ಲಿ ಬರೆದಿರುವ ವಿಚಾರವನ್ನು ತಿಳಿದು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-**47** ರಲ್ಲಿ **8** ನೇ ಆರೋಪಿಯ ಮಾದರಿ ವಾಯ್ಸ್ ಸಂಗ್ರಹಿಸಿರುವುದು ಗೊತ್ತಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **8** ನೇ ಆರೋಪಿ ಪರ ಶ್ರೀ ಕೆ.ಎಂ.ಬಿ. ವಕೀಲರಿಂದಃ</u>

**8** ನೇ ಆರೋಪಿ ಪರ ವಕೀಲರು ತಮ್ಮ ಪರ ಯಾವುದೆ ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದುದರಿಂದ ಅವರ ಪರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

**2** ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.